# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 881 |
| ಮಾನ್ಯ ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | : | 14/03/2025 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು. |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಿಶೇಷವಾಗಿ ವಿಕಲಚೇತನರಿಗೆ ಸರ್ಕಾರದಿಂದ ನೀಡಲಾಗುವ ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳು ಯಾವುವು: (ಮಾಹಿತಿ ಒದಗಿಸುವುದು) | ರಾಜ್ಯದಲ್ಲಿ ವಿಕಲಚೇತನರಿಗೆ ಸರ್ಕಾರದಿಂದ ನೀಡಲಾಗುವ ಆರೋಗ್ಯಕ್ಕೆ ಸಂಬಂಧಿಸಿದ ಯೋಜನೆಗಳು ಈ ಕೆಳಗಿನಂತಿವೆ.<br><br>1. **ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆ:-** ಸದರಿ ಯೋಜನೆಯಡಿ ಶಸ್ತ್ರಚಿಕಿತ್ಸೆಯ ಮುಖಾಂತರ ವಿಕಲಚೇತನತೆಯನ್ನು ನಿವಾರಣೆ ಮಾಡಿಕೊಳ್ಳಲು ಅಥವಾ ಕಡಿಮೆ ಮಾಡಿಕೊಳ್ಳಲು ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು, ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಅಥವಾ ಕರ್ನಾಟಕದ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ರೂ.1.00 ಲಕ್ಷಗಳವರೆಗೆ ಸಹಾಯ ಧನವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಯೋಜನೆಯನ್ನು ದಿನಾಂಕ:01-04-2000ರಲ್ಲಿ ಜಾರಿಗೆ ತಂದಿದ್ದು, ಪ್ರಥಮವಾಗಿ ರೂ.15,000/-ಗಳ ಸಹಾಯಧನವನ್ನು ನೀಡಲಾಗುತ್ತಿದ್ದು, 2008ರಲ್ಲಿ ರೂ.15,000/-ಗಳಿಂದ ರೂ.35,000/-ಗಳವರೆಗೆ ಶಸ್ತ್ರಚಿಕಿತ್ಸೆಯ ಮೊತ್ತವನ್ನು ಹೆಚ್ಚಿಸಲಾಗಿರುತ್ತದೆ ಹಾಗೂ 2014ರಲ್ಲಿ ರೂ.35,000/-ಗಳಿಂದ ರೂ.1,00,000/-ಗಳಿಗೆ ಹೆಚ್ಚಿಸಿ ವಿಕಲಚೇತನರಿಗೆ ರೂ.1,00,000/-ಗಳವರೆಗೆ ಶಸ್ತ್ರಚಿಕಿತ್ಸಾ ವೆಚ್ಚವನ್ನು ಭರಿಸಲಾಗುತ್ತಿದೆ.<br><br>2. **"ನಿರಾಮಯ ಆರೋಗ್ಯ ವಿಮಾ ಯೋಜನೆಯ"** ಪ್ರಸ್ತುತ ರಾಜ್ಯದಲ್ಲಿ ನ್ಯಾಷನಲ್ ಟ್ರಸ್ಟ್ ಆಕ್ಟ್ 1999ರಡಿ 04 ಬಗೆಯ ವಿಕಲಚೇತನರಿಗೆ (ಆಟಿಸಂ, ಸೆರಬ್ರಲ್ ಪಾಲ್ಸಿ, ಬುದ್ಧಿಮಾಂದ್ಯ ಮತ್ತು ಬಹುವಿಧ ಅಂಗವಿಕಲರು) ನಿರಾಮಯ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತಂದಿದ್ದು, ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಈ 04 ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಒಂದು ಬಾರಿ ವಾರ್ಷಿಕ ರೂ.250/-ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿ, ಪ್ರತಿವರ್ಷ ರೂ.1.00 ಲಕ್ಷಗಳವರೆಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಪಡೆಯ ಬಹುದಾಗಿರುತ್ತದೆ. ಈ ಮೊತ್ತದಲ್ಲಿ ರೂ.40,000/-ಗಳವರೆಗೆ ಶಸ್ತ್ರಚಿಕಿತ್ಸೆ ರೂ.15,000/- ಶಸ್ತ್ರಚಿಕಿತ್ಸೆ ರಹಿತ ಖಾಯಿಲೆಗಳ ವೆಚ್ಚ ರೂ.15,000/- ಹೊರ ರೋಗಿ ವಿಭಾಗದ ವೆಚ್ಚ, ಆರೋಗ್ಯ ತಪಾಸಣೆ, ಪರೀಕ್ಷೆಗಳು, ಔಷಧಿಗಳು, ರೂ.4000/- ಹಲ್ಲುಗಳಿಗೆ ಸಂಬಂಧಿಸಿದ ವೆಚ್ಚ ರೂ.20,000/-ಗಳ ಚಾಲ್ತಿಯಲ್ಲಿರುವ ಥೆರಪಿ ರೂ.4,000/- ಪರ್ಯಾಯ ಔಷಧಿಗಳು ರೂ.2,000/- ಪ್ರಯಾಣ ವೆಚ್ಚಗಳನ್ನು ಒಳಗೊಂಡಿರುತ್ತದೆ. ಬಡತನರೇಖೆಗಿಂತ ಮೇಲ್ಪಟ್ಟ ಕುಟುಂಬದ ವಿಕಲಚೇತನ ವ್ಯಕ್ತಿಗಳು ವಾರ್ಷಿಕ ರೂ.500/-ಗಳನ್ನು ಪಾವತಿಸಿ ಈ ಸೌಲಭ್ಯ ಪಡೆಯಬಹುದಾಗಿರುತ್ತದೆ. |

| | | |
|---|---|---|
| | | 3. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ **ಕಾಕ್ಲಿಯಾರ್ ಇಂಪ್ಲಾಂಟ್ ಯೋಜನೆ ಅಡಿಯಲ್ಲಿ** ಕಡ್ಡಾಯ ನವಜಾತ ಶಿಶುಗಳ ಶ್ರವಣ ತಪಾಸಣೆ ನಡೆಸಿ, ಗುರುತು ಹಚ್ಚಿದ ತೀವ್ರತರವಾದ / ಗಂಭೀರ ಸ್ವರೂಪದ ಶ್ರವಣದೋಷವುಳ್ಳ 6 ವರ್ಷದ ಕೆಳಗಿನ ಮಕ್ಕಳಿಗೆ ಶ್ರವಣ ಸಾಧನಗಳನ್ನು ನೀಡಿ, ಟ್ರಯಲ್ಆಡಿಟರಿವರ್ಬಲ್ ಥೆರಪಿಯನ್ನು ಒದಗಿಸಲಾಗುವುದು, ಮುಂದುವರೆದು ಶ್ರವಣ ದೋಷವುಳ್ಳ ವ್ಯಕ್ತಿಗಳಿಗೆ ಸಾಧನಗಳಿಂದ ಸರಿಪಡಿಸಲಾಗದಿದ್ದಲ್ಲಿ, ಕಾಕ್ಲಿಯಾರ್ ಇಂಪ್ಲಾಂಟ್ಶಸ್ತ್ರಚಿಕಿತ್ಸೆ ಒದಗಿಸುವುದರೊಂದಿಗೆ, ಶಸ್ತ್ರಚಿಕಿತ್ಸಾ ನಂತರದ 2 ವರ್ಷಗಳ ಪುನರ್ವಸತಿ ಆಡಿಟರಿವರ್ಬಲ್ ಥೆರಪಿ ಚಿಕಿತ್ಸೆಯನ್ನು ಉಚಿತವಾಗಿ ಒದಗಿಸಲಾಗುತ್ತಿದೆ. 2016-17ನೇ ಸಾಲಿನಿಂದ ಇಲ್ಲಿಯವರೆಗೆ 665 ಫಲಾನುಭವಿಗಳಿಗೆ ಶಸ್ತ್ರಚಿಕಿತ್ಸೆಯನ್ನು ನಡೆಸಲಾಗಿರುತ್ತದೆ |
| ಆ) | ವಿಶೇಷವಾಗಿ ವಿಕಲಚೇತನರಿಗೆ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲೂ ಬಳಸುವಂತೆ ಆರೋಗ್ಯ ವಿಮೆಯನ್ನು ಸರ್ಕಾರದ ವತಿಯಿಂದ ಭರಿಸಲು ಮುಂದಾಗುವುದೇ; ಇದರ ಬಗ್ಗೆ ಸರ್ಕಾರದ ಅಭಿಪ್ರಾಯವೇನು; (ಮಾಹಿತಿ ಒದಗಿಸುವುದು) | ನಿರಾಮಯ ಆರೋಗ್ಯ ವಿಮಾ ಯೋಜನೆಯಡಿ 04 ಬಗೆಯ ವಿಕಲಚೇತನರಿಗೆ (ಆಟಿಸಂ, ಸೆರಬ್ರಲ್‌ಪಾಲ್ಸಿ, ಬುದ್ಧಿಮಾಂದ್ಯ ಮತ್ತು ಬಹುವಿಧ ಅಂಗವಿಕಲರು) ಖಾಸಗಿ ಅಥವಾ ಸರ್ಕಾರಿ ಆಸ್ಪತ್ರೆಗಳಲ್ಲಿ ಪಡೆದ ಚಿಕಿತ್ಸೆಯ ಗರಿಷ್ಠ 01 ಲಕ್ಷದವರೆಗೆ ಶಸ್ತ್ರಚಿಕಿತ್ಸೆ ಹಾಗೂ ವೈದ್ಯಕೀಯ ವೆಚ್ಚಗಳನ್ನು ಕೇಂದ್ರ ಸರ್ಕಾರವು ಗುರುತಿಸಿರುವ ಸಂಸ್ಥೆಯ ಮುಖಾಂತರ ಪಡೆಯುತ್ತಿದ್ದಾರೆ. |
| ಇ) | ಜೀವನ ನಿರ್ವಹಣೆಗೂ ಕಷ್ಟಪಡುವ ಇವರುಗಳಿಗೆ ಸರ್ಕಾರವು ಕನಿಷ್ಠ ಉಚಿತ ಆರೋಗ್ಯ ವಿಮೆಗಳನ್ನು ನೀಡಲು ಇರುವ ತೊಂದರೆಗಳೇನು; ಇದನ್ನು ಜಾರಿಗೊಳಿಸಲು ಸರ್ಕಾರದ ತೀರ್ಮಾನಗಳೇನು? (ವಿವರಗಳನ್ನು ನೀಡುವುದು). | ಈ ಬಗ್ಗೆ ಪರಿಶೀಲಿಸಲಾಗುವುದು. |

**ಸಂಖ್ಯೆ:ಮಮಇ 80 ಪಿಹೆಚ್‌ಪಿ 2025**

(ಲಕ್ಷ್ಮೀ ಆರ್. ಹೆಬ್ಬಾಳಕರ್)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ,
ವಿಕಲಚೇತನರ ಹಾಗೂ ಹಿರಿಯ ನಾಗರಿಕರ
ಸಬಲೀಕರಣ ಸಚಿವರು

# Legislative Council

| | | |
|---|---|---|
| Stared Question No | : | 881 |
| Name of the Honorable Member Of Legislative Assembly | : | Shri Y.M. Sathish (Local Bodies Constancy ) |
| Date of Answering | : | 14.03.2025 |
| The Person Answering | : | Hon'ble minister of Women and child development and Empowerment of Differently abled and Senior Citizens. |

| S.No | Question | Answer |
|---|---|---|
| A | What are the health related schemes offered by the government especially for the differently abled in the state; (providing information) | 1. Corrective surgery scheme for Persons with Disabilities : Under this scheme, Medical reimbursement is provided to disables to undergo surgery at Sanjay Gandhi Accident and Research Institute, Bengaluru, any Government hospitals or well-equipped private hospitals across the state of Karnataka for reduce their disability or to correct the disability, maximum of Rs.1.00 lakh financial assistance is provided.<br>This scheme is implemented on 01-04-2000 during that time Rs.15000 /- relief was provided later in the year 2008 it was enhanced to Rs.35,000/- and in the year 2014 it was enhanced to Rs.1,00,000/-.<br>2. "Niramaya Arogya Vima Yojana" is currently implemented in the state under the National Trust Act 1999 for 4 types of disabilities (Autism, Cerebral Palsy, Mental Retardation and Multiple Handicapped) and Niramaya Arogya Vima Yojana has been implemented in Karnataka state. These 04 types of disabled persons belonging to below line families can get free medical facility up to Rs.1.00 lakhs every year by paying a one time annual insurance premium of Rs.250/- from the government. Surgery up to Rs.40,000/- in this amount Rs.15,000/- Non-surgical expenses Rs.15,000/- Outpatient expenses, health checks, tests, medicines Rs.4000/- Dental expenses Rs.20,000/- Ongoing therapy Rs.4,000/- Alternative medicines Rs.2,000/- Travel expenses includes Persons with disabilities from family above poverty line can avail this facility by paying Rs.500/- per annum.<br>3. Cochlear Implant scheme by Health |

| | | |
|---|---|---|
| | | Department: Under this scheme newborn hearing screening is mandatory. Department of Health and Family Welfare has identified severe/severe hearing loss Children below the age group of 6 years. After identification they have provided hearing aids and trial auditory verbal therapy. If the hearing loss is persistent and uncorrectable with the devices, along with cochlear implantation surgery, 2 years post-surgery, rehabilitation is provided free of cost. From 2016-17 so far 665 beneficiaries are received benefit under this scheme. |
| B | Offer to pay for health insurance by the government, especially for the disabled, to be used in both government and private hospitals; What is the Government's view on this: (providing information) | Under Niramaya Arogya Vima Yojana for 04 types of disabilities (Autism, Cerebral Palsy, Mental Retardation and Multiple Handicapped), surgery and medical expenses up to a maximum of 01 lakhs for treatment received, through the Institution identified by the Central Government. |
| C | What are the difficulties of the government providing at least free health insurance to those who are struggling to make ends meet; What are the decisions of the Government to implement this? (Give details) | This will be examined |

**WCD 80 PHP 2025**

(Lakshmi R. Hebbalkr)
Minister for women and child
Development And Empowerment of Differently
Abled and Senior Citizens.

# ಪೂರಕ ಟಿಪ್ಪಣಿ

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಸದಸ್ಯರಾದ ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 881ಕ್ಕೆರ ಪೂರಕ ಟಿಪ್ಪಣಿ:-**

**ಅಂಗವಿಕಲತೆ ನಿವಾರಣಾ ವೈದ್ಯಕೀಯ ಪರಿಹಾರ ನಿಧಿ ಯೋಜನೆ**:-ಸದರಿ ಯೋಜನೆಯಡಿ ಶಸ್ತ್ರಚಿಕಿತ್ಸೆಯ ಮುಖಾಂತರ ವಿಕಲಚೇತನತೆಯನ್ನು ನಿವಾರಣೆ ಮಾಡಿಕೊಳ್ಳಲು ಅಥವಾ ಕಡಿಮೆ ಮಾಡಿಕೊಳ್ಳಲು ಸಂಜಯಗಾಂಧಿ ಅಪಘಾತ ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಹಾಗೂ ಎಲ್ಲಾ ಸರ್ಕಾರಿ ಆಸ್ಪತ್ರೆ ಅಥವಾ ಸುಸಜ್ಜಿತ ಖಾಸಗಿ ಆಸ್ಪತ್ರೆಗಳಲ್ಲಿ ಶಸ್ತ್ರಚಿಕಿತ್ಸೆ ಮಾಡಿಸಿಕೊಳ್ಳಲು ರೂ.1.00 ಲಕ್ಷಗಳವರೆಗೆ ಸಹಾಯಧನವನ್ನು ಮಂಜೂರು ಮಾಡಲಾಗುತ್ತಿದೆ. ಸದರಿ ಯೋಜನೆಯನ್ನು ದಿನಾಂಕ:01-04-2000ರಲ್ಲಿ ಜಾರಿಗೆತಂದಿದ್ದು, ಪ್ರಥಮವಾಗಿ ರೂ.15,000/-ಗಳ ಸಹಾಯಧನವನ್ನು ನೀಡಲಾಗುತ್ತಿದ್ದು, 2008ರಲ್ಲಿ ರೂ.15,000/-ಗಳಿಂದ ರೂ.35,000/-ಗಳವರೆಗೆ ಶಸ್ತ್ರಚಿಕಿತ್ಸೆಯ ಮೊತ್ತವನ್ನು ಹೆಚ್ಚಿಸಲಾಗಿರುತ್ತದೆ ಹಾಗೂ 2014ರಲ್ಲಿ ರೂ.35,000/-ಗಳಿಂದ ರೂ.1,00,000/-ಗಳಿಗೆ ಹೆಚ್ಚಿಸಿ ವಿಕಲಚೇತನರಿಗೆ ರೂ.1,00,000/-ಗಳವರೆಗೆ ಶಸ್ತ್ರಚಿಕಿತ್ಸಾ ವೆಚ್ಚವನ್ನು ಭರಿಸಲಾಗುತ್ತಿದೆ.

ಸದರಿ ಯೋಜನೆಯಡಿ ಶಸ್ತ್ರಚಿಕಿತ್ಸೆ ವೆಚ್ಚ, ಔಷಧಿ ವೆಚ್ಚ,ವೈದ್ಯಕೀಯ ಪರೀಕ್ಷೆಗಳ ವೆಚ್ಚ ಮತ್ತು ಬೆಡ್ ಚಾರ್ಜ್‌ಗಳನ್ನು ಭರಿಸಲು ಅವಕಾಶ ಕಲ್ಪಿಸಿದ್ದು, ಸದರಿ ಯೋಜನೆಯಡಿ ದೈಹಿಕ ಅಂಗವಿಕಲತೆಯುಳ್ಳವರು, ದೃಷ್ಟಿದೋಷವುಳ್ಳವರು, ಶ್ರವಣದೋಷವುಳ್ಳವರು, ಬುದ್ಧಿಮಾಂದ್ಯರು, ಕುಷ್ಠರೋಗ ನಿವಾರಿತರು, ಬಹು ಅಂಗವಿಕಲತೆಯುಳ್ಳವರು ಮತ್ತು ಮಾನಸಿಕ ಅಸ್ವಸ್ಥರು ಸೌಲಭ್ಯವನ್ನು ಪಡೆಯಬಹುದಾಗಿದೆ.

**"ನಿರಾಮಯ ಆರೋಗ್ಯ ವಿಮಾ ಯೋಜನೆಯ"** ಪ್ರಸ್ತುತ ರಾಜ್ಯದಲ್ಲಿ ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್ ಆಕ್ಟ್ 1999ರಡಿ 04 ಬಗೆಯ ವಿಕಲಚೇತನರಿಗೆ (ಆಟಿಸಂ, ಸೆರಬ್ರಲ್‌ಪಾಲ್ಸಿ, ಬುದ್ಧಿಮಾಂದ್ಯ ಮತ್ತು ಬಹುವಿಧಅಂಗವಿಕಲರು) ನಿರಾಮಯ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲಾಗಿರುತ್ತದೆ. ಸದರಿ ಯೋಜನೆಯನ್ವಯ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 04 ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಪ್ರಥಮ ಬಾರಿ ರೂ.250/-ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿ, ಪ್ರತಿ ವರ್ಷ ರೂ.1.00 ಲಕ್ಷಗಳವರೆಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಪಡೆಯಬಹುದಾಗಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಮಮಇ 115 ಪಿಹೆಚ್‌ಪಿ 2017, ದಿನಾಂಕ:21.08.2014ರಲ್ಲಿ ರಾಜ್ಯದಲ್ಲಿನ 4 ಬಗೆಯ ಅಂಗವಿಕಲತೆಯುಳ್ಳ (ಆಟಿಸಂ, ಸೆರಬ್ರಲ್‌ಪಾಲ್ಸಿ, ಬುದ್ಧಿಮಾಂದ್ಯ ಮತ್ತು ಬಹುವಿಧ ಅಂಗವಿಕಲರು) ವಿಕಲಚೇತನ ವ್ಯಕ್ತಿಗಳು ಬಡತನ ರೇಖೆಗಿಂತ ಕಡಿಮೆ ಇರುವ ಕುಟುಂಬಗಳಿಗೆ ಪ್ರಥಮ ಬಾರಿ ರೂ.250/-ಗಳನ್ನು ಮತ್ತು ಬಡತನ ರೇಖೆಗಿಂತ ಮೇಲಿರುವ ಕುಟುಂಬಗಳಿಗೆ ಪ್ರಥಮ ಬಾರಿ ರೂ.500/-ಗಳನ್ನು ಸರ್ಕಾರದ ವತಿಯಿಂದ ವಿಮಾಕಂತಾಗಿ ಪಾವತಿಸಿ, ಪ್ರತಿ ವರ್ಷ ರೂ.1.00 ಲಕ್ಷಗಳವರೆಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಪಡೆಯಲು ನಿರಾಮಯ ಆರೋಗ್ಯ ವಿಮಾ ಯೋಜನೆಯನ್ನು ಜಾರಿಗೆ ತರಲು ಆಡಳಿತಾತ್ಮಕ ಮಂಜೂರಾತಿ ನೀಡಿ ಆದೇಶಿಸಲಾಗಿರುತ್ತದೆ.

ಸದರಿ ಯೋಜನೆಯಡಿ ಪ್ರಥಮ ಬಾರಿಗೆ ಸರ್ಕಾರದ ವತಿಯಿಂದ ವಿಮಾಕಂತನ್ನು ಪಾವತಿಸಲಾಗುತ್ತಿದ್ದು, ನಂತರದಲ್ಲಿ ವಾರ್ಷಿಕವಾಗಿ ರೂ.50/-ಗಳ ನವೀಕರಣ ವೆಚ್ಚವನ್ನು ಪಾವತಿಸಿ ವಿಮೆಯನ್ನು ಚಾಲ್ತಿಯಲ್ಲಿರಿಸಬೇಕಾಗುತ್ತದೆ. ರೂ.40,000/-ಗಳವರೆಗೆ ಶಸ್ತ್ರಚಿಕಿತ್ಸೆ ರೂ.15,000/- ಶಸ್ತ್ರಚಿಕಿತ್ಸೆ ರಹಿತ ಖಾಯಿಲೆಗಳ ವೆಚ್ಚ ರೂ.15,000/- ಹೊರ ರೋಗಿ ವಿಭಾಗದ ವೆಚ್ಚ, ಆರೋಗ್ಯ ತಪಾಸಣೆ, ಪರೀಕ್ಷೆಗಳು, ಔಷಧಿಗಳು, ರೂ.4000/- ಹಲ್ಲುಗಳಿಗೆ ಸಂಬಂಧಿಸಿದ ವೆಚ್ಚ ರೂ.20,000/-ಗಳ ಚಾಲ್ತಿಯಲ್ಲಿರುವ ಥೆರಪಿ ರೂ.4,000/- ಪರ್ಯಾಯ ಔಷಧಿಗಳು ರೂ.2,000/- ಪ್ರಯಾಣ ವೆಚ್ಚಗಳನ್ನು ಒಳಗೊಂಡಂತೆ ಒಟ್ಟು ರೂ.1.00 ಲಕ್ಷಗಳವರೆಗೆ ಉಚಿತವಾಗಿ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶವಿದ್ದು, ಕೇಂದ್ರ ಸರ್ಕಾರವು ಗುರುತಿಸಿರುವ ಸಂಸ್ಥೆಯ ಮುಖಾಂತರ ಪಡೆಯುತ್ತಿದ್ದಾರೆ.

ಈ ಯೋಜನೆಗೆ ಸಂಬಂಧಿಸಿದಂತೆ ನ್ಯಾಷನಲ್ ಟ್ರಸ್ಟ್ ಕಾಯಿದೆ-1999ರಡಿ ನೋಂದಣಿಯಾದ ಒಂದು ಸಂಸ್ಥೆಯು ರಾಜ್ಯದಲ್ಲಿ ನಿರಾಯಮ ಯೋಜನೆಗೆ ಸಂಬಂಧಿಸಿದಂತೆ ನೋಡಲ್ ಏಜೆನ್ಸಿಯಾಗಿ ಕಾರ್ಯ ನಿರ್ವಹಿಸುತ್ತದೆ. ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು, ಈ ಯೋಜನೆ ಬಗ್ಗೆ VRW, MRW ಮತ್ತು URW ಗಳ ಮೂಲಕ ವ್ಯಾಪಕ ಪ್ರಚಾರ ನೀಡಿ, ರಾಜ್ಯದಲ್ಲಿನ 4 ಬಗೆಯ ವಿಕಲಚೇತನವ್ಯಕ್ತಿಗಳು ಯೋಜನೆಯ ಸೌಲಭ್ಯ ತಲುಪಿಸಲು ಕ್ರಮ ವಹಿಸಲಾಗಿರುತ್ತದೆ.

ಕಳೆದ 03 ವರ್ಷಗಳಲ್ಲಿ ವೈದ್ಯಕೀಯ ಪರಿಹಾರ ನಿಧಿ ಯೋಜನೆ ಹಾಗೂ ನಿರಾಮಯ ಯೋಜನೆಗಳಡಿ ಭರಿಸಿರುವ ಆಯವ್ಯಯದ ವಿವರವು ಈ ಕೆಳಕಂಡಂತಿದೆ.

**(ರೂ.ಲಕ್ಷಗಳಲ್ಲಿ)**

| **ಯೋಜನೆಗಳ ವಿವರ** | **2021-22** | | **2022-23** | | **2023-24** | |
|---|---|---|---|---|---|---|
| | **ಆರ್ಥಿಕ** | **ಭೌತಿಕ** | **ಆರ್ಥಿಕ** | **ಭೌತಿಕ** | **ಆರ್ಥಿಕ** | **ಭೌತಿಕ** |
| **ವೈದ್ಯಕೀಯ ಪರಿಹಾರನಿಧಿ** | **31.26** | **47** | **17.65** | **32** | **19.58** | **37** |
| **ನಿರಾಮಯ** | **1.00** | **362** | **12.54** | **4719** | **17.19** | **6876** |